**2 ನೇ ಅಧಿಕ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ, ಹಾಸನ,**

**ಎಸ್.ಸಿ.ನಂಃ-167/2019**

ಪಿ.ಡಬ್ಲ್ಯೂಃ- 20

ಸಿ.ಡಬ್ಲ್ಯೂಃ- 24

| | | |
|---|---|---|
| ಸಾಕ್ಷಿದಾರರ ಹೆಸರುಃ | : | ಸೌಭಾಗ್ಯ |
| ಗಂಡನ ಹೆಸರುಃ | : | ಜಯಶಂಕರ್ |
| ವಯಸ್ಸುಃ | : | 37 ವರ್ಷ |
| ವೃತ್ತಿಃ | : | ಮಹಿಳಾ ಪೊಲೀಸ್ ಪೇದೆ 554,<br>ಹೊಳೇನರಸೀಪುರ ಡಿವೈ ಎಸ್ ಪಿ ಕಚೇರಿ |
| ವಾಸಃ | : | ಹೊಳೇನರಸೀಪುರ |

**ದಿನಾಂಕಃ 04.10.2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

ನಾನು 2017 ರಿಂದ 2022 ರವರೆಗೆ ಹಳ್ಳಿ ಮೈಸೂರು ಪೊಲೀಸ್ ಠಾಣೆಯಲ್ಲಿ ಪೊಲೀಸ್ ಕಾನ್ಸ್ ಟೇಬಲ್ ಆಗಿ ಕಾರ್ಯ ನಿರ್ವಹಿಸಿರುತ್ತೇನೆ. ದಿಃ14.01.2018 ರಂದು ಚಾಸಾ-27 ಪಿಎಸ್ಐ ರವರು ನನ್ನನ್ನು ಹೊಳೇನರಸೀಪುರ ಗ್ರಾಮಾಂತರ ಪೊಲೀಸ್ ಠಾಣೆಯ ಮೊಃನಂ.1/2018 ಪ್ರಕರಣಕ್ಕೆ ಸಂಬಂಧಿಸಿದಂತೆ ಮೈಸೂರು ಮೆಡಿಕಲ್ ಕಾಲೇಜಿನ ಶವಾಗಾರದ ಕೊಠಡಿಯಲ್ಲಿದ್ದ ಮೃತೆ ಲಕ್ಷ್ಮಿರವರ ಮೃತ ದೇಹಕ್ಕೆ ಸಂಬಂಧಿಸಿದಂತೆ ಶವ ಬೆಂಗಾವಲು ಕರ್ತವ್ಯ ನಿರ್ವಹಿಸುವಂತೆ ಸೂಚಿಸಿದ್ದು ನಾನು ಅದೇ ದಿನ ಮಧ್ಯಾಹ್ನ 1 ಗಂಟೆ ಸಮಯಕ್ಕೆ ಮೈಸೂರು ಮೆಡಿಕಲ್ ಕಾಲೇಜಿನ ಶವಾಗಾರಕ್ಕೆ

ಹೋಗಿರುತ್ತೇನೆ. ನಂತರ ಮೃತೆ ಲಕ್ಷ್ಮಿ ರವರ ಶವದ ಮೇಲೆ ಶವಪಂಚನಾಮೆ ಆದ ನಂತರ ಮೃತಳ ಮೃತ ದೇಹವನ್ನು ಶವಪರೀಕ್ಷೆಗೆ ಒಳಪಡಿಸಲಾಗಿರುತ್ತದೆ. ಮೃತಳ ಶವಪರೀಕ್ಷೆಯಾದ ನಂತರ ಮೃತೆಯ ತಂದೆಯವರಿಗೆ ಮೃತೆಯ ಅಂತಿಮ ಸಂಸ್ಕಾರ ನಡೆಸಲು ಮೃತ ದೇಹವನ್ನು ನೀಡಲಾಗಿರುತ್ತದೆ.

**ಪಾಟೀ ಸವಾಲುಃ ಆರೋಪಿಗಳ ಪರ ಶ್ರೀ ಸಿ ಕೆ ವಕೀಲರಿಂದಃ**

2. ಶವಪಂಚನಾಮೆ ಕಾಲದಲ್ಲಿ ಹಾಜರಿದ್ದ ಸಾಕ್ಷಿದಾರರ ಹೆಸರುಗಳು ನನಗೆ ತಿಳಿದಿಲ್ಲ. ಸಾಕ್ಷಿದಾರರ ಪೈಕಿ ಸವಿತಾ, ರಂಗಸ್ವಾಮಿ ಹಾಗೂ ಶೇಖರ್ ರವರ ಹೆಸರುಗಳು ನನಗೆ ತಿಳಿದಿದೆ ಉಳಿದವರ ಹೆಸರುಗಳು ತಿಳಿದಿಲ್ಲ. ಶವಪಂಚನಾಮೆ ಕಾಲದಲ್ಲಿ ನಾನು ಇರದೇ ಇದ್ದರೂ ಸಹ ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ.

2 ನೇ ಅಧಿಕ ಜಿಲ್ಲಾ ಮತ್ತು ಸೆಷನ್ಸ್
ನ್ಯಾಯಾಧೀಶರು, ಹಾಸನ.